(ಆ) ವಿಷಯ : ಚಾಮರಾಜನಗರದ ನಾಗಪಳ್ಳಿ ಗ್ರಾಮದಲ್ಲಿ ನಡೆದ ಘಟನೆಯ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ನಾಗವಳ್ಳಿ ಗ್ರಾಮವು ಚಾಮರಾಜನಗರದಿಂದ 10 ಕಿ.ಮೀ. ದೂರವಿದ್ದು ಸುಮಾರು 500 ಮನೆಗಳು ಹರಿಜನರರಾಗಿದ್ದು, 150 ಉಪ್ಪಾರಶೆಟ್ಟಿ ಜನಾಂಗದವರಾಗಿದ್ದು ಹಾಗೂ ಇನ್ನುಳಿದ 150 ಮನೆಗಳು ನಾಯಕರು, ಗಾಣಿಗಶೆಟ್ಟರು, ಮುಸಲ್ಮಾನರು, ಕ್ರಿಶ್ಚಿಯನ್ನರು ಇವರುಗಳವಾಗಿವೆ. ಈ ಗ್ರಾಮದ ಜನಸಂಖ್ಯೆ ಸುಮಾರು 4000ವಿದೆ. ಪ್ರತಿ ವರ್ಷ ಈ ಗ್ರಾಮದಲ್ಲಿ ಮಾರಮ್ಮನ ಹಬ್ಬವನ್ನು ಆಚರಿಸುವ ಪದ್ಧತಿಯಿದೆ. ಹಾಗೂ ಎರಡು ವರ್ಷಕ್ಕೊಮ್ಮೆ ಈ ಹಬ್ಬದ ಮಾರನೆಯ ದಿನ ದೊಣ್ಣೆ ವರಸೆಯನ್ನು ಉಪ್ಪಾರಶೆಟ್ಟಿ ಜನಾಂಗದವರು ನಡೆಸುವ ಪದ್ಧತಿ ಇದೆ. ಈ ವರ್ಷ ದಿನಾಂಕ : 16-3-93ರಂದು ಮಾರಮ್ಮನ ಹಬ್ಬವನ್ನು ಎಲ್ಲಾ ಜನಾಂಗದವರು ಸೇರಿ ಆಚರಿಸಿದರು. ಪದ್ಧತಿಯಂತೆ ಉಪ್ಪಾರಶೆಟ್ಟಿ ಜನಾಂಗದವರು ರಾಮಮಂದಿರ ಮುಂಭಾಗದಲ್ಲಿ ದೊಣ್ಣೆವರಸೆ ಮಾಡುತ್ತಿದ್ದಾಗ ಸುಮಾರು ಸಂಜೆ 5-45 ಕ್ಕೆ ಸಿದ್ದಯ್ಯನಪುರ ಗ್ರಾಮದ ಮಹಾದೇವಸ್ವಾಮಿ (ಹರಿಜನ) ಹಾಗೂ ನಾಗವಳ್ಳಿ ಗ್ರಾಮದ ಶಿವಣ್ಣ (ಹರಿಜನ) ಸ್ಕೂಟರಿನಲ್ಲಿ ಬಂದು ಗುಂಪಿನ ನಡುವೆ ಸ್ಕೂಟರ್ ಹೋಗಲು ದಾರಿ ಕೇಳಿದರು. ಇದರಿಂದ ದೊಣ್ಣೆ ವರಸೆ ಮಾಡುವವರಿಗೆ ಅಡ್ಡಿಯುಂಟಾಗಿ, ವಾದ ವಿವಾದಕ್ಕಿಳಿದರು. ಈ ವಿವಾದದ ಮಧ್ಯೆ ಸ್ಕೂಟರ್ ಹಿಂಭಾಗದಲ್ಲಿ ಕುಳಿತಿದ್ದ ಶಿವಣ್ಣನು(ಹರಿಜನ) ಗುಂಪಿನಲ್ಲಿದ್ದವರನ್ನು ಚಪ್ಪಲಿಯಿಂದ ಹೊಡೆಯುವುದಾಗಿ ಬೈದಿರುತ್ತಾನೆ. ಆಗ ಅಲ್ಲೇ ಇದ್ದ ಉಪ್ಪಾರಶೆಟ್ಟಿ ಯುವಕರು ಅವರನ್ನು ಹಿಡಿದುಕೊಳ್ಳಲು ಹೋದಾಗ ಇಬ್ಬರೂ ಸ್ಥಳದಲ್ಲೇ ಸ್ಕೂಟರನ್ನು ಬಿಟ್ಟು ಓಡಿ ಹೋಗಿರುತ್ತಾರೆ.

ಇದಾದ ನಂತರ, ಸ್ವಲ್ಪ ಸಮಯದಲ್ಲಿಯೇ ಹರಿಜನ ಕೇರಿಯಿಂದ ಸುಮಾರು 500-600 ಜನರು ಗುಂಪು ಕಟ್ಟಿಕೊಂಡು ಉಪ್ಪಾರಶೆಟ್ಟಿಯ ಬೀದಿಗೆ ಬಂದು ಕಲ್ಲು ತೂರಾಟ ನಡೆಸಿದರು. ಹಾಗೂ ಇನ್ನೊಂದು ಹರಿಜನರ ಗುಂಪು ಮಹಾದೇವಶೆಟ್ಟಿ ಎಂಬುವವರ ಮನೆಗೆ ಬೆಂಕಿ ಹಚ್ಚಿದ್ದು, ಅದನ್ನು ಕಂಡು ಮಹಾದೇವ ಶೆಟ್ಟಿಯು ಮನೆಯಲ್ಲಿದ್ದ ಕುರಿಮರಿಗಳನ್ನು ಬೆಂಕಿಯಿಂದ ಪಾರು ಮಾಡುವುದಕ್ಕೋಸ್ಕರ ಓಡುತ್ತಿದ್ದಾಗ ಶಿವಣ್ಣ ಹಾಗೂ ಮಹಾದೇವ ಸ್ವಾಮಿ ಅವರ ಮುಂದಾಳತ್ವದಲ್ಲಿ ಹರಿಜನರ ಗುಂಪು ಮಹಾದೇವಶೆಟ್ಟಿಯನ್ನು ತಡೆದು ಮಚ್ಚು ಮತ್ತು ದೊಣ್ಣೆಗಳಿಂದ ಹಲ್ಲೆ ನಡೆಸಿ ಕೊಂದಿರುತ್ತಾರೆ. ಹಾಗೂ ಇದೇ ಗುಂಪು 4 ಉಪ್ಪಾರಶೆಟ್ಟಿಯವರ ಮನೆಗಳಿಗೆ ಮತ್ತು ಐದು ಹುಲ್ಲಿನ ಮೇದೆಗಳಿಗೆ ಬೆಂಕಿಯಿಟ್ಟಿರುತ್ತಾರೆ. ಕಲ್ಲು ತೂರಾಟದಲ್ಲಿ 50 ಮನೆಗಳು ಒಡೆದಿರುತ್ತವೆ. ಈ ವಿಷಯ ತಿಳಿದ ತಕ್ಷಣ ಚಾಮರಾಜರಾಜನಗರ ಪೂರ್ವ ಪೋಲೀಸ್ ಠಾಣೆಯ ಪೋಲೀಸರು ಅಗ್ನಿ ಶಾಮಕ ದಳದೊಂದಿಗೆ ಸ್ಥಳಕ್ಕೆ ದಾವಿಸಿ ಮುಂದೆ ಆಗಬಹುದಾದ ಅನಾಹುತಗಳನ್ನು ತಪ್ಪಿಸಿರುತ್ತಾರೆ. ಅದೇ ದಿನ ಸುಮಾರು 10-30 ಗಂಟೆ ಮಹಾದೇವ ಶೆಟ್ಟಿಯ ಸಹೋದರನಾದ ಚಿಕ್ಕಮಹಾದೇವ ಅವರು ನೀಡಿದ ದೂರಿನ ಮೇರೆಗೆ ಮೊಕದ್ದಮೆ ಸಂಖ್ಯೆ. 23:93 ಕಲಂ 143-147-148-324-435-436-427-302 ಮತ್ತು 149 ಐ.ಪಿ.ಸಿ. ರೀತ್ಯ ಚಾಮರಾಜನಗರ ಪೂರ್ವ ಪೋಲೀಸ್ ಠಾಣೆಯಲ್ಲಿ ಕೇಸು ದಾಖಲು ಮಾಡಲಾಗಿದೆ. ಈ ಸುದ್ದಿ ತಿಳಿದ